ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

ಕೃಷಿ ಬಿಕ್ಕಟ್ಟು, ಕವಲು ದಾರಿಯಲ್ಲಿ ಮಹಿಳೆ ; ಒಂದು ಅಧ್ಯಯನ.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಮಹಿಳಾ ಅಧ್ಯಯನ

ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಸಾದರ ಪಡಿಸುತ್ತಿರುವ ಸಾರಲೇಖ.

ಮಾರ್ಗದರ್ಶಕರು

ಡಾ.ಲಕ್ಷ್ಮೀದೇವಿ.ವಾಯ್.

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗ,

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ವಿಜಯಪುರ.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ಸಂಶೋಧನಾ ವಿದ್ಯಾರ್ಥಿನಿ

ಶಿವಪೂಜಾ ಹಿರೇಮಠ.

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗ,

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ವಿಜಯಪುರ.

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

೨೦೧೭–೧೮

ಕೃಷಿಯ ಇತಿಹಾಸ.

ಕೃಷಿ ಕಾರ್ಯದ ಉಗಮ ಮಾನವ ನಾಗರಿಕತೆಯಲ್ಲಿ ಕ್ರಾಂತೀಕಾರಿಯಾದ ಬದಲಾವಣೆಯಾಗಿದೆ. ಭೂಮಿಯ ಮೇಲೆ ಬದುಕಲು ಆಹಾರ ಬೇಕು. ಆದ್ದರಿಂದ ಆಹಾರ ಸಂಗ್ರಹಣೆಯಿಂದ ಮಾನವ ಆಹಾರ ಉತ್ಪಾದನೆಯತ್ತ ಹೆಜ್ಜೆ ಹಾಕಿದ. ಕೃಷಿಯಿಂದಾಗಿ ಮನುಷ್ಯ ಕ್ರಮೇಣ ನಾಗರಿಕತೆಯ ಮಜಲುಗಳನ್ನು ತಲುಪಲು ಸಾಧ್ಯವಾಯಿತು. ಕೃಷಿ ಕಾರ್ಯದ ಪರಿಚಯದಿಂದ ಈಜಿಪ್ತ, ಮೆಸಪೋಟೊಮಿಯಾ,ಮೊಹೆಂಜೋದಾರೋ,ಹರಪ್ಪಾ,ಸಿಂಧೂ ನಾಗರಿಕತೆಗಳು ಬೆಳೆದು ಬಂದವು.ಈ ಬುನಾದಿಗೆ ನಾಂದಿ ಹಾಡಿದವರು ಮಹಿಳೆಯರು.ಕೃಷಿಯನ್ನು ಕಂಡು ಹಿಡಿದವಳು ಮಹಿಳೆ.

ಬೇಟೆಯಾಡುವುದನ್ನು ಕಲಿಯುವದಕ್ಕಿಂತ ಮೊದಲು ಸ್ತ್ರೀ–ಪುರುಷರಲ್ಲಿ ಕೆಲಸದ ಹಂಚಿಕೆ ಇರಲಿಲ್ಲ ಎಲ್ಲರು ಸಮಾನರಾಗಿ ಆಹಾರವನ್ನು ಸಂಗ್ರಹಿಸುತ್ತಿದ್ದರು.ಯಾವಾಗ ಈಟಿಯನ್ನು ಪ್ರಯೋಗಿಸಿ ಬೇಟಿ ಆಡುವುದನ್ನು ಕಲಿತ ನಂತರ ಸ್ತ್ರೀಯರು ಬೇಟೆಯಾಡುವುದನ್ನು ನಿಲ್ಲಿಸಿದರು.ಇದಕ್ಕೆ ಕಾರಣ ಬೇಟೆಯಾಡಲು ಈಟಿ ಭರ್ಚಿಗಳನ್ನು ಹಿಡಿದುಕೊಂಡು ಅಲೆಯಬೇಕಾಗಿತ್ತು.ಮಹಿಳೆಯರಿಗೆ ಈಟಿ,ಭರ್ಚಿಗಳನ್ನು ಹಿಡಿದುಕೊಂಡು ಬೇಟೆಯಾಡಲು ಸಾಧ್ಯವಾಗಲಿಲ್ಲ ಇದಕ್ಕೆ ಕಾರಣ ಮಹಿಳೆಯರು ಸಂತಾನೋತ್ಪತ್ತಿ ಕ್ರಿಯೆಯಲ್ಲಿ ತೊಡಗುವ,ಗರ್ಭಿಣಿಯಾಗುವ ಅವರು ಆ ಸಂದರ್ಭದಲ್ಲಿ ಈಟಿ ಭರ್ಚಿಗಳಿಂದ ಬೇಟೆಯಾಡಲು ಸಾಧ್ಯವಾಗದೆ ಮನೆಯಲ್ಲಿಯೇ ಉಳಿದರು.ಆದ್ದರಿಂದ ಮಹಿಳೆಯರ ಮೇಲೆ ಬೇರೆಯದೆ ಆದ ಜವಾಬ್ದಾರಿ ಬಿತ್ತು.ಅದೆಂದರೆ ಮಕ್ಕಳ ಪಾಲನೆ ಪೋಷಣೆ ಇದರ ಜೊತೆಗೆ ಮಹಿಳೆಯರು ಮನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಸಿಗುವ ಗಡ್ಡೆ–ಗೆಣಸು,ಹಣ್ಣು–ಹಂಪಲುಗಳ ಸಂಗ್ರಹಣೆಯಲ್ಲಿ ತೊಡಗಿದರು.ಈ ಸಂದರ್ಭದಲ್ಲಿ ತಾವು ತಿಂದು ಏಸೆದ ಬೀಜಗಳು ಅಲ್ಲಲ್ಲಿ ಮೊಳಕೆಯೊಡೆದುದನ್ನು, ಸಸಿಯಾಗಿ ಬೆಳೆಯುವುದನ್ನು ಕಂಡರು.ಇದೇ ಕೃಷಿಯ ಉಗಮಕ್ಕೆ ಮೊದಲ ಹಜ್ಜೆಯಾಯಿತು.

ಕೃಷಿ ಮಹಿಳೆಯರ ಆವಿಷ್ಕಾರವಾದ್ದರಿಂದ ಇದರಲ್ಲಿ ಪುರುಷರ ಸಹಾಯ ಸಹಕಾರ ಇರಲಿಲ್ಲ.ಎಲ್ಲ ಕೆಲಸಗಳು ಮಹಿಳೆಯರಿಂದಲೆ ನಡೆಯುತ್ತಿದ್ದವು.ಪುರುಷ ಬೇಟೆಯಾಡುತ್ತ ಕಾಡಿನಲ್ಲಿ ಅಲೆಯುತ್ತಿದ್ದ. ಮಹಿಳೆಯರು ತಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ನೆಲ ಅಗೆದು ಬೀಜ ಹಾಕಿ ಬೆಳೆ ಬೆಳೆಯುತ್ತಿದ್ದರು.ಕಲ್ಲಿನ ಉಪಕರಣಗಳನ್ನು ಬಳಸಿಕೊಂಡು ಚಿಕ್ಕ ಚಿಕ್ಕ ಹೊಲಗಳನ್ನು ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದರು.ಈ ಪದ್ದತಿಗೆ 'ಗಾರ್ಡನ್ ಟೆಲೇಜ್' ಎಂದು ಕರೆಯುತ್ತಾರೆ.(ಗಾರ್ಡನ್ ಟೆಲೇಜ್ ಎಂಬ ಪದವನ್ನು ಮೂಲ ದೇವಿಪ್ರಸಾದ ಚಟ್ಟೋಪಾಧ್ಯಾಯ,ಕನ್ನಡಕ್ಕೆ ಜಿ.ಕುಮಾರಪ್ಪಾ ರವರ ಪುಸ್ತಕವಾದ 'ಮಾತೆಯರು ಮಾನ್ಯರಾಗಿದ್ದಾಗ' ಎಂಬ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ.) ಕೃಷಿ ಉತ್ಪಾದನೆ ಹಂತಕ್ಕೆ ತಲುಪಿದ ನಂತರ,ಎತ್ತು,ನೆಗಿಲನ್ನು ಬಳಸಿಕೊಂಡು ಕೃಷಿ ಮಾಡುವ ವಿಧಾನ ಬಳಕೆಗೆ ಬಂದ ನಂತರ ಕೃಷಿ ಸ್ತ್ರೀಯರ ಕೈಯಿಂದ ಪುರುಷರ ಕೈಗೆ ವರ್ಗಾವಣೆಯಾಯಿತು.

ಪೀಠಿಕೆ.

ಭಾರತದಲ್ಲಿ ಕೃಷಿಯನ್ನು 'ಜ್ಞಾನ' ಎಂದು ಪರಿಗಣಿಸದೆ,ಅನಕ್ಷರಸ್ಥರ ಕೆಲಸವೆಂದು ಪರಿಗಣಿಸಲಾಗುತ್ತಿದೆ. ಕೃಷಿ ಉದ್ಯೋಗ ಮತ್ತು ಆದಾಯದ ಮೂಲವಾಗಿದೆ. ಬ್ರಿಟಿಷರ ಆಗಮನಕ್ಕಿಂತ ಮೊದಲು ಭಾರತದ ರೈತರು ಸ್ವಾವಲಂಬಿ, ಸುಖಿ ಜೀವನವನ್ನು ನಡೆಸುತ್ತಿದ್ದರು. ತಮಗೆ ಅಗತ್ಯವಾದ ಅನ್ನ, ಬಟ್ಟೆ, ವಸತಿ ಮತ್ತು ಇನ್ನಿತರ ಅವಶ್ಯಕತೆಗಳಿಗೆ ಅನುಸಾರವಾಗಿ ದುಡಿಯುತ್ತಿದ್ದರು. ಬ್ರಿಟಿಷರ ಆಗಮನದಿಂದ ಚಹಾ, ಕಾಫಿ ಬೆಳೆಗಳ ಪರಿಚಯವಾಯಿತು. ಸ್ವಾತಂತ್ರ್ಯಾನಂತರ, ದೇಶ ವಿಭಜನೆಯಾಯಿತು. ಇದರಿಂದ ಸಿಂಧೂ ಪ್ರಾಂತದ ಫಲವತ್ತಾದ ಭೂಮಿ ಪಾಕಿಸ್ತಾನದ ಪಾಲಾಯಿತು. ಇದರಿಂದ ಭಾರತದ ಆಹಾರ ಭದ್ರತೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತು. ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೆ ಸಾಂಪ್ರದಾಯಿಕ ಕೃಷಿಯನ್ನು ಮಾಡಲಾಗುತ್ತಿತ್ತು. ಜಾಗತೀಕರಣದ ನಂತರ ರೈತರು ಆಧುನಿಕ ಕೃಷಿಪದ್ದತಿಯನ್ನು ಅಳವಡಿಸಿಕೊಂಡರು. ಐ.ಎಂ.ಎಫ್. ವಿಶ್ವಬಾಂಕ್, ಗ್ಯಾಟ್, ಮುಕ್ತ

ಮಾರುಕಟ್ಟೆಗಳಿಂದ ಕೃಷಿ ನಾಶ ಹೊಂದಿದೆ. ಆಧುನಿಕ ಕೃಷಿಯಿಂದ ಉತ್ಪಾದನೆಯಾಗುವ ಆಹಾರ ಧಾನ್ಯಗಳು ವಿಷವಾಗಿವೆ, ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಅತಿಯಾದ ಬಳಕೆಯಿಂದ ನದಿ, ಹಳ್ಳ–ಕೊಳ್ಳ, ಕೆರೆ_ಬಾವಿಗಳ ಅಂತರ್ಜಲ ಮಲೀನವಾಗಿದೆ. ಹಸಿರು ಕ್ರಾಂತಿಯ ಪರಿಣಾಮದಿಂದ ಮಣ್ಣಿನ ಸಾರ ಕಡಿಮೆಯಾಗಿದೆ, ಅಂತರ್ಜಲ ಮಟ್ಟ ಇಳಿಕೆಯಾಗಿದೆ, ರೈತರು ಕೃಷಿಯಿಂದ ವಿಮುಖರಾಗುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ.ಕೃಷಿ ಕ್ಷೇತ್ರವನು ್ನಕಾರ್ಪೋರೇಟ್ ಕಂಪನಿಗಳು ನಿಯಂತ್ರಿಸುತ್ತಿವೆ. ಇದರಿಂದ ಕೃಷಿಗೆ ಅಗತ್ಯವಿರುವ ಎಲ್ಲ ವಸ್ತುಗಳನ್ನು ಇಂತಹ ಕಂಪನಿಗಳು ಉತ್ಪಾದಿಸುತ್ತಿವೆ. ಇಂತಹ ಕಂಪನಿಗಳು ಆಹಾರ ಬೆಳೆಗಳಿಗೆ ಪ್ರೋತ್ಸಾಹ ಕೊಡದೆ ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ಕೊಡುತ್ತಿವೆ. ಇದರಿಂದ ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಇಲ್ಲದೆ ಇಂದು ಅನೇಕ ರೈತರು ಆತ್ಮಹತ್ಯೆಯ ಮೊರೆ ಹೋಗುತ್ತಿದ್ದಾರೆ. ಇಲ್ಲಿಯವರೆಗೆ ಶೇ.೧೧.೨ ರಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನ್ಯಾಷನಲ್ ಕ್ರೈಂ ರೇಕಾರ್ಡ್ ಬ್ಯೂರೋ ಪ್ರಕಾರ ೨೦೧೩ ರಲ್ಲಿ ಮಹಾರಾಷ್ಟ್ರದಲ್ಲಿ ೧೨೬ ಮಹಿಳಾ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತ ಮಹಿಳೆಯರ ಆತ್ಮಹತ್ಯೆ ಪ್ರಕರಣಗಳು ಕಡಿಮೆ ಪ್ರಮಾಣದಲ್ಲಿ ಬೆಳಕಿಗೆ ಬಂದಿವೆ. ಇಂತಹ ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡರು ಅದನ್ನು ವರದಕ್ಷಣೆ ಸಾವು, ಅಥವಾ ಅಪಘಾತ ಪ್ರಕರಣ ಎಂದು ತೋರಿಸಲಾಗುತ್ತದೆ.

ಪ್ರಪಂಚದಾದ್ಯಂತ ೧ ಬಿಲಿಯನ್ ರಷ್ಟು ಕೃಷಿ ಕಾರ್ಮಿಕರಿದ್ದಾರೆ. ಇವರಲ್ಲಿ ಶೇ.೨೬ ರಷ್ಟು ಮಹಿಳಾ ಕಾರ್ಮಿಕರಿದ್ದಾರೆ. ಭಾರತದ ಮೂರನೇಯ ಎರಡರಷ್ಟು ಜನ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ.   ೯೮ % ರಷ್ಟು ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಅವರಲ್ಲಿ ೧೩ % ರಷ್ಟು ಭೂಮಾಲೀಕರಾಗಿದ್ದಾರೆ. ಉಳಿದ ೮೫% ರಷ್ಟು ಕೃಷಿ ಕೂಲಿ ಕಾರ್ಮಿಕರಾಗಿದ್ದಾರೆ. ಕರ್ನಾಟಕದಲ್ಲಿ ೩೧.೮೭% ರಷ್ಟು ಕೃಷಿ ಕೂಲಿ ಕಾರ್ಮಿಕರಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ೫೨.೨% ರಷ್ಟು ಕೃಷಿ ಕೂಲಿ ಕಾರ್ಮಿಕರಿದ್ದಾರೆ. ಕೃಷಿಯಲ್ಲಿ ಮಹಿಳೆಯರು ವರ್ಷಪೂರ್ತಿ ದುಡಿದರೂ ಅವರ ದುಡಿಮೆಗೆ ಸಿಗುವ ಪ್ರತಿಫಲ ಕಡಿಮೆ. ಕೃಷಿಯಲ್ಲಿನ ಹೊಸ ಹೊಸ ತಂತ್ರಜ್ಞಾನಗಳ ಬಳಕೆಯಿಂದ, ಯಂತ್ರೋಪಕರಣಗಳ ಬಳಕೆಯಿಂದ ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಿದೆ. ಇವರು ಉದ್ಯೋಗವನ್ನು ಕಳೆದುಕೊಂಡು ನಿರುದ್ಯೋಗಿಗಳಾಗುತ್ತಿದ್ದಾರೆ. ಕೃಷಿ ಅಧಿಕ ಸಂಖ್ಯೆಯಲ್ಲಿ ಉದ್ಯೋಗಾವಕಾಶಗಳನ್ನು ಹೊಂದಿರುವ ಕ್ಷೇತ್ರವಾಗಿದೆ. ಆದರೆ ಆಧುನೀಕರಣದ ಪ್ರಭಾವದಿಂದ ಕೃಷಿಯಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ. ಕೆಲಸ ಹುಡಿಕಿಕೊಂಡು ನಗರಗಳಿಗೆ ವಲಸೆ ಹೊಗುತ್ತಿದ್ದಾರೆ. ಕುಟುಂಬದ ನಿರ್ವಹಣೆಯ ಜವಾಬ್ದಾರಿ ಹೊತ್ತಿರುವ ಮಹಿಳೆಯರು ಪುರುಷರ ಹಾಗೆ ದೂರದ ಊರುಗಳಿಗೆ ಕೂಲಿ ಕೆಲಸ ಹುಡುಕಿಕೊಂಡು ಹೋಗಲಾರದೆ ಕೃಷಿಯೇತರ ಕೆಲಸಗಳು ಸಿಗದೆ ಅತಂತ್ರ ಸ್ಥಿತಿಯಲ್ಲಿ ಇದ್ದಾರೆ. ಗ್ರಾಮೀಣ ಕ್ಷೇತ್ರದಲ್ಲಿ ಮಹಿಳೆಯರು ಸಾಂಪ್ರದಾಯಿಕ ಕೃಷಿಯಲ್ಲಿ ದುಡಿಯುತ್ತಿದ್ದಾರೆ ಇವರು ಕುಟುಂಬ ನಿರ್ವಹಣೆಗಾಗಿ ಕೂಲಿ ಕೆಲಸ ಮಾಡುತ್ತಾರೆ. ಆಧುನಿಕ ಕೃಷಿಯಲ್ಲಿ ಮಹಿಳೆಯರ ಕೆಲಸವನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಆಧುನಿಕ ಸುಧಾರಿತ ಕೃಷಿ ಉಪಕರಣಗಳ ಬಳಕೆಯಿಂದ ಈ ಮಹಿಳೆಯರು ತಮ್ಮ ಕೆಲಸವನ್ನು ಕಳೆದುಕೊಳ್ಳುತ್ತಿದ್ದಾರೆ.

ಸಾಂಪ್ರದಾಯಿಕ ಕೃಷಿಯಲ್ಲಿ ಮಹಿಳೆಯರು ಕಳೆ ಕೀಳುವುದು, ಅಕ್ಕಡಿ ಹಾಕುವುದು, ಮಡಿ ಮಾಡುವುದು, ಮುಂಗಾರಿ–ಹಿಂಗಾರಿ ಬೆಳೆಗಳಿಗೆ ತಕ್ಕಂತೆ ಮಿಶ್ರ ಬೆಳೆಗಳನ್ನು ಬೆಳೆಯುವುದು, ಮುಂದಿನ ಬಿತ್ತನೆಗಾಗಿ ಬೀಜಗಳನ್ನು ಸಂಗ್ರಹಿಸುವುದು, ತಮ್ಮ ಮನೆಯ ಸುತ್ತಮುತ್ತಲಿನ ಖಾಲಿ ಜಾಗದಲ್ಲಿ ಕೈ ತೋಟ ಮಡಿಕೊಂಡು ಕಾಯಿಪಲ್ಲೆಗಳನ್ನು ಬೆಳೆದುಕೊಳ್ಳುವುದು, ಕುಟುಂಬದ ಆಹಾರದ ನಿರ್ವಹಣೆಯ ಹೊಣೆಯನ್ನು ಹೊತ್ತೀದ್ದಾರೆ. ಅಷ್ಟೇ ಅಲ್ಲದೆ ಪ್ರಪಂಚದ ಆಹಾರದ ಉತ್ಪಾದನೆ, ಸಂಸ್ಕರಣೆ ಮತ್ತು ತಯಾರಿಕೆಯಲ್ಲಿ ಶೇ;೪೩ ರಷ್ಟು ಮಹಿಳೆಯರು ತೊಡಗಿಕೊಂಡಿದ್ದಾರೆ. ಪರಿಸರ ಸಂರಕ್ಷಣೆ ಮಾಡುವಲ್ಲಿ ಮಹಿಳೆಯರ ಪಾತ್ರ ದೊಡ್ಡದು ಮಿಶ್ರ ಬೆಳೆಗಳನ್ನು ಬೆಳೆಯುವದರ ಹಿಂದಿನ ಉದ್ದೇಶ ಭೂಮಿಗೆ ಪೋಷಕಾಶಂಗಳನ್ನು ಒದಗಿಸುವ ಒಂದು ವಿಧಾನವಾಗಿತ್ತು, ಮಹಿಳೆಯರು ಅನಕ್ಷರಸ್ತರಾದರು ವಿವಿಧ ರೀತಿಯ ಮಿಶ್ರ ಬೆಳೆಗಳನ್ನು ಬೆಳೆಯುವುದರ ಹಿಂದಿನ ಉದ್ದೇಶ ಅವರಿಗೆ ಗೊತ್ತಿತ್ತು ಪುರುಷರು ಕೇವಲ ಲಾಭದ ಉದ್ದೇಶದಿಂದ ಬೆಳೆಗಳನ್ನು ಬೆಳೆದರೆ, ಮಹಿಳೆಯರು ಕೌಟುಂಬಿಕ ನಿರ್ವಹಣೆ, ಪರಿಸರ ರಕ್ಷಣೆ, ನೀರಿನ ಸಮರ್ಪಕ ಬಳಕೆ ಮಾಡಿಕೊಂಡು ಬೆಳೆಗಳನ್ನು ಬೆಳೆಯುತ್ತಾರೆ. ಮಹಿಳೆಯರ ಈ ದುಡಿಮೆಯನ್ನು ಅವಳ ಜವಾಬ್ದಾರಿ ಎಂದು ಪರಿಗಣಸಲಾಗುತ್ತದೆಯೇ ಹೊರತು ಆದಾಯವೆಂದು ಪರಿಗಣಿಸಲಾಗುವುದಿಲ್ಲ.

ಕೃಷಿ ಪದದ ಅರ್ಥ.

ಅಗ್ರಿಕಲ್ಚರ್ ಎಂಬ ಪದದ ಇಂಗ್ಲೀಷ್ ರೂಪಾಂತರವೇ ಕೃಷಿಯಾಗಿದೆ.ಇದರ ಮೂಲ ಲ್ಯಾಟಿನ್. ಅಗ್ರಿಕಲ್ಚರ್ ಪದವು ಎರಡು ಪದಗಳನ್ನು ಹೊಂದಿದೆ.'ಅಗರ್' ಎಂದರೆ 'ಹೊಲ', 'ಕಲ್ಚರ್' ಎಂದರೆ ಸಾಗುವಳಿ. ಅಗ್ರಿಕಲ್ಚರ್ ಎಂದರೆ ಭೂಮಿಯ ಉಳುವಿಕೆ ಎಂದರ್ಥ.

ಬಿಕ್ಕಟ್ಟು ಪದದ ಅರ್ಥ.

ಬಿಕ್ಕಟ್ಟು ಎಂದರೆ ಮುಗ್ಗಟ್ಟು, ವಿಷಮ ಸ್ಥಿತಿ, ತೀವ್ರ ಅಪಾಯದ, ಕಷ್ಟದ, ಅಸ್ಥಿರ ಪರಿಸ್ಥಿತಿ ಎಂದರ್ಥ.

ಕೃಷಿ ಕೂಲಿ ಕಾರ್ಮಿಕರು.

ಕೃಷಿ ಪ್ರಾಥಮಿಕ ವಲಯದಲ್ಲಿ ಬರುತ್ತದೆ. ಇದು ಆಹಾರ, ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಮಾತ್ರ ಒದಗಿಸದೆ, ಅತೀ ಹೆಚ್ಚು ಉದ್ಯೋಗಾವಕಾಶಗಳನ್ನು ಹೊಂದಿದ ಕ್ಷೇತ್ರವಾಗಿದೆ. 65% ಉದ್ಯೋಗಗಳು ಕೃಷಿ ವಲಯದಿಂದ ದೊರಕುತ್ತವೆ. ಕೃಷಿಯಲ್ಲಿ ಕೂಲಿ ಕಾರ್ಮಿಕರು ಹೆಚ್ಚಾಗಿದ್ದಾರೆ. ಅದರಲ್ಲು ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಕೂಲಿ ಕಾರ್ಮಿಕರು ಹೆಚ್ಚಾಗಿದ್ದಾರೆ.

ಕೃಷಿ ಕೂಲಿ ಕಾರ್ಮಿಕರ ಅರ್ಥ.

ಗ್ರಾಮೀಣ ಪ್ರದೇಶದಲ್ಲಿ ಸ್ವಂತ ಭೂಮಿ ಇಲ್ಲದೆ ಇರುವವರು, ಬೇರೆಯವರ ಭೂಮಿಯಲ್ಲಿ ಕೂಲಿಗಾಗಿ ದುಡಿಯುವವರು, ಕೃಷಿಯಲ್ಲಿ ಕೂಲಿ ಕೆಲಸದ ಮೇಲೆ ಅವಲಂಬಿತವಾಗಿರುವವರು.

ವ್ಯಾಖ್ಯೆ.

ಭಾರತದ ಜನಗಣತೀ 1961 ರ ಪ್ರಕಾರ.

ಕೃಷಿಯಲ್ಲಿ ಬೇರೆಯವರ ಭೂಮಿಯಲ್ಲಿ ಕೆಲಸ ಮಾಡುವವರು, ಆ ಕೆಲಸಕ್ಕೆ ಕೂಲಿಯನ್ನು ಹಣ ಅಥವಾ ಬೇರೆ ರೂಪದಲ್ಲಿ (ಅಂದರೆ ಕಾಳು_ಕಡಿ, ಬಟ್ಟೆ, ಆಹಾರ ಮತ್ತು ಇತರೆ ವಸ್ತುಗಳು) ಪಡೆಯುವವರು ಕೃಷಿ ಕಾರ್ಮಿಕರು.

ಕೃಷಿ ಕಾರ್ಮಿಕರ ವಿಧಗಳು.

1.ಜೀತದಾಳುಗಳು.

ಇವರು ಭೂಮಾಲೀಕರಲ್ಲಿ ಗುಲಾಮರ ರೀತಿ ಕೆಲಸ ಮಾಡುವವರು. 1 ಅಥವಾ 2 ವರ್ಷಗಳ ಒಪ್ಪಂದ ಮೇರೆಗೆ ಜೀವನ ನಿರ್ವಹಣೆಗಾಗಿ,ಒತ್ತಾಯಪೂರ್ವಕವಾಗಿ ಜೀತದಾಳಾಗಿ ದುಡಿಯುವವರು.

2.ಸೀಮಿತಾವಧಿ ಕೃಷಿ ಕೂಲಿ ಕಾರ್ಮಿಕರು.

ಇವರು ಕೃಷಿಯ ಮೇಲೆ ಅವಲಂಬಿರಾಗಿರದೆ, ಕೃಷಿ ಕೆಲಸ ಪ್ರಾರಂಭವಾದೊಡನೆ ಮತ್ತು ಬೆಳೆ ಕಟಾವು ಮಾಡುವ ಸಂದರ್ಭದಲ್ಲಿ ಮಾತ್ರ ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಾರೆ. ಇವರು ಬೇರೆ ಬೇರೆ ಕೆಲಸಗಳಲ್ಲಿ (ಕಂಬಾರಿಕೆ, ಬಡೀಗತನ, ಕುಂಬಾರಿಕೆ ಇತ್ಯಾದಿ) ನಿರತರಾಗಿರುತ್ತಾರೆ.

3.ಭೂರಹಿತ ಕಾರ್ಮಿಕರು.

ಇವರು ಕೃಷಿಯ ಮೇಲೆ ಅಷ್ಟೇ ಅವಲಂಬಿತರಾಗಿರದೆ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಗುಂಪು ಕಟ್ಟಿಕೊಂಡು, ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಾರೆ. ಇವರು ಕೈಗಾರಿಕೆಗಳಲ್ಲಿ, ಮನೆ ಕಟ್ಟುವ ಸ್ಥಳಗಳಲ್ಲಿ ದುಡಿಯುತ್ತಾರೆ.

4.ಪೂರ್ಣಾವಧಿ ಭೂರಹಿತ ಕೃಷಿ ಕೂಲಿ ಕಾರ್ಮಿಕರು.

ಇವರು ದೊಡ್ಡ ದೊಡ್ಡ ಜಮೀನ್ದಾರರ ತೋಟಗಳಲ್ಲಿ, ಹೊಲಗಳಲ್ಲಿ ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಾರೆ. ಇವರು ಸ್ವಂತ ಕೃಷಿ ಭೂಮಿಯನ್ನು ಹೊಂದಿರುವುದಿಲ್ಲ. ಇವರು ಬೇರೆ ಯಾವ ಕೆಲಸಗಳನ್ನು ಮಾಡದೆ ಕೃಷಿಯ ಮೇಲೆ ಅವಲಂಬಿತರಾಗಿರುತ್ತಾರೆ.

ಅಧ್ಯಯನದ ಮಹತ್ವ.

ವಿಶ್ವಸಂಸ್ಥೆಯ ಪ್ರಕಾರ, ಪ್ರಪಂಚದ ಕೃಷಿ ಶ್ರಮಶಕ್ತಿಯಲ್ಲಿ 43% ಗ್ರಾಮೀಣ ಮಹಿಳೆರಿದ್ದಾರೆ. ಇವರನ್ನು ಗೌರವಿಸಲೆಂದೆ ಪ್ರತಿ ವರ್ಷ ಅಕ್ಟೋಬರ್ 15 ರಂದು 'ಅಂತರ ರಾಷ್ಟೀಯ ಗ್ರಾಮೀಣ ಮಹಿಳಾ ದಿನ' ಎಂದು ಘೋಷಿಸಿದೆ. ಕೃಷಿ ಮತ್ತು ಮಹಿಳೆಯರಿಗಿರುವ ಸಂಬಂಧ ಇಂದು ನಿನ್ನೆಯದಲ್ಲ. ಕೃಷಿಯನ್ನು ಶೋಧಿಸಿದವಳು ಮಹಿಳೆ. ಕೃಷಿ ಪ್ರಧಾನ ಕುಟುಂಬಗಳಲ್ಲಿ ಮಹಿಳೆಯರೆ ಮನೆಯೊಡತಿಯರಾಗಿದ್ದು ಅವರ ಶ್ರಮಕ್ಕೆ ಬಹಳ ಮಹತ್ವವಿದೆ. ಕೃಷಿ ಕ್ಷೇತ್ರದಲ್ಲಿ ಮಹಿಳೆಯರೆ ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಕೃಷಿ ಕಾರ್ಮಿಕ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಇಂತ ಕೃಷಿ ಕಾರ್ಮಿಕ ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕ್ರತಿಕ ಜೀವನದ ಕುರಿತು ಅಧ್ಯಯನ ಮಾಡುವುದು ಮಹತ್ವವಾಗಿದೆ.

ಉದ್ದೇಶಗಳು.

1.ಮಹಿಳಾ ಕೃಷಿ ಕೂಲಿ ಕಾರ್ಮಿಕರ ಸಾಮಾಜಿಕ, ಆರ್ಥಿಕ,ಸಾಂಸ್ಕೃತಿಕ,ಆರೋಗ್ಯ,ಕೌಟುಂಬಿಕ ಸ್ಥಿತಿಗತಿಯ ಕುರಿತು ತಿಳಿಯುವುದು.

2.ಕೃಷಿ ಬಿಕ್ಕಟ್ಟಿನಿಂದ ಮಹಿಳಾ ಕೃಷಿ ಕೂಲಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯಗಳ ಕುರಿತು ತಿಳಿಯುವುದು.
3.ಮಹಿಳೆಯರು ಕೃಷಿಯಲ್ಲಿ ಕೇವಲ ಕೃಷಿ ಕೂಲಿ ಕಾರ್ಮಿಕರಾಗಿ ಉಳಿಯಲು ಕಾರಣಗಳನ್ನು ತಿಳಿಯುವುದು.

ವೈಧಾನಿಕತೆ.

ಈ ಅಧ್ಯನದಲ್ಲಿ ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯನ್ನು ಅಳವಡಿಸಿಕೊಳ್ಳಲಾಗುವುದು. ಮಾಹಿತಿ ಸಂಗ್ರಹಣೆಗಾಗಿ ಸಂದರ್ಶನ ವಿಧಾನ, ಸಹಭಾಗಿ ಅವಲೋಕನ ಮತ್ತು ಪ್ರಕರಣ ಅಧ್ಯಯನವನ್ನು ಕೈಗೊಳ್ಳಲಾಗುವುದು.

ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ಅರ್ಥ.

ಮಹಿಳೆ ಹಾಗೂ ಜಂಡರ್ ಬಗ್ಗೆ ಜ್ಞಾನವನ್ನು ಸೃಷಿಸುವುದು ಸ್ತ್ರೀವಾದಿ ಸಂಶೋಧನೆ.

ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯ ವ್ಯಾಖ್ಯೆ.

ಮಾರಿಯಾ ಮಿಸ್ ರವರ ಪ್ರಕಾರ.

'ಸ್ತ್ರೀವಾದಿ ಸಂಶೋಧನೆಯು ಕೇವಲ ಮಹಿಳೆಯರ ಬಗ್ಗೆ ಸಂಶೋಧನೆ ಅಲ್ಲದೇ ಅವರ ಲಿಂಗಾಧಾರಿತ ಸಮಾಜದ ಬದಲಾವಣೆಯ ಸಂಶೋಧನೆಯಾಗಿದೆ'. ಎಂದು ಹೇಳಿದ್ದಾರೆ.

ವ್ಯಾಪ್ತಿ.

ಕರ್ನಾಟಕ ರಾಜ್ಯದ ಐತಿಹಾಸಿಕ ನಗರಿ ಎಂದು ಕರೆಸಿಕೊಂಡಿರುವ ವಿಜಯಪುರ ಜಿಲ್ಲೆಯು ಒಟ್ಟು 10,53,471 ಹೆಕ್ಟೆರ್ ಭೂಮಿಯನ್ನು ಹೊಂದಿದೆ. ಅದರಲ್ಲಿ 7,87,593 ಹೆಕ್ಟೆರ್ ಕೃಷಿಯೋಗ್ಯ ಭೂಮಿಯನ್ನು ಹೊಂದಿದೆ. ಜಿಲ್ಲೆಯ 15% ಭೂಮಿಯು ನೀರಾವರಿ ಸೌಲಭ್ಯವನ್ನು ಹೊಂದಿದೆ, ಉಳಿದ 85% ಮಳೆಯಾಶ್ರಿತ ಭೂಮಿಯನ್ನು ಹೊಂದಿದೆ. 75% ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಇವರಲ್ಲಿ ಭೂರಹಿತರು, ಚಿಕ್ಕ ಭೂ ಹಿಡುವಳಿದಾರರು, ಕೃಷಿ ಕಾರ್ಮಿಕರು ಇದ್ದಾರೆ.

ವಿಜಯಪುರ ಜಿಲ್ಲೆಯು 5 ತಾಲ್ಲೂಕುಗಳನ್ನು ಒಳಗೊಂಡಿದ್ದು, ಪ್ರತಿ ತಾಲ್ಲೂಕಿನಿಂದ 05 ಹಳ್ಳಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು.ವಿಜಯಪುರ ಜಿಲ್ಲೆಯ 5 ತಾಲೂಕುಗಳ 25 ಹಳ್ಳಿಗಳಿಂದ ವಕ್ತೃಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು, ಪ್ರತಿ ಹಳ್ಳಿಯಿಂದ 05 ಜನ ಮಹಿಳಾ ಕೃಷಿ ಕೂಲಿ ಕಾರ್ಮಿಕರನ್ನು ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗುವುದು. ಒಟ್ಟು 250 ಜನ ಕೃಷಿ ಕೂಲಿ ಕಾರ್ಮಿಕ ಮಹಿಳೆಯರಿಂದ ಸರಳ ಯಾದೃಚಿಕ ವಿಧಾನವನ್ನು ಅಳಡಿಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗುವುದು.

ಇತಿಮಿತಿಗಳು.

1.ಈ ಅಧ್ಯಯನವು ಕೇವಲ ಕೃಷಿ ಕೂಲಿ ಕಾರ್ಮಿಕ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದಾಗಿದೆ.

2.ಈ ಅಧ್ಯಯನವು ವಿಜಯಪುರ ಜಿಲ್ಲೆಯ 5 ತಾಲ್ಲೂಕುಗಳಿಗೆ ಮಾತ್ರ ಸಂಬಂಧಿಸಿದ್ದಾಗಿದೆ.

3.ಈ ಅಧ್ಯಯನವು ಕೇವಲ 250 ಜನ ಕೃಷಿ ಕೂಲಿ ಕಾರ್ಮಿಕ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದಾಗಿದೆ.

ಉಪಸಂಹಾರ.

ಆಧುನೀಕಣದ ತಂತ್ರಜ್ಞಾನದಿಂದ ಉಂಟಾದ ಹಸಿರು,ನೀಲಿ,ಬಿಳಿ,ಹಳದಿ ಕ್ರಾಂತಿಗಳು ಬೀರಿದ ಪರಿಣಾಮ ಹಾಗೂ ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಗ್ರಾಮೀಣ ಮಹಿಳೆಯರಿಗೆ ಆಧಾರವಾಗಿದ್ದ ಕೃಷಿ ಮತ್ತು ಕೃಷಿಯೇತರ ಉಪಕಸುಬುಗಳು ನಿಧಾನವಾಗಿ ನಾಶವಾಗುತ್ತಾ ಬಂದವು. ಇದರಿಂದ ಕೃಷಿಯನ್ನೆ ನಂಬಿದ್ದ ಮಹಿಳೆಯರು ಆಧುನಿಕ ಮತ್ತು ಸಾಂಪ್ರದಾಯಿಕ ಕೃಷಿಯ ನಡುವೆ ಹೊಂದಿಕೊಳ್ಳಲಾರದೆ ಅತಂತ್ರ ಸ್ಥಿತಿಯಲ್ಲಿ ಇದ್ದಾರೆ. ಕೃಷಿ ಕ್ಷೇತ್ರದಲ್ಲಿ ಅಧಿಕ ಪ್ರಮಾಣದಲ್ಲಿ ಕೃಷಿ ಕೂಲಿ ಕಾರ್ಮಿಕ ಮಹಿಳೆಯರು ಇದ್ದಾರೆ. ಇವರಲ್ಲಿ ಭೂ ರಹಿತರು ಪರಿಶಿಷ್ಟ ಜಾತಿ–ಪಂಗಡದ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ .ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಬಳಸಲಾಗುತ್ತಿರುವ ಆಧುನಿಕ ಕೃಷಿ ತಂತ್ರಜ್ಞಾನಗಳು, ಉಪಕರಣಗಳು, ಸುಧಾರಿತ ತಳಿಗಳು, ಬೀಜಗಳಿಂದ ಇಂತಹ ಮಹಿಳೆಯರು ಉದ್ಯೋಗವನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ.

ಆಧಾರ ಗ್ರಂಥಗಳು.

1.ಡಾ.ರಾಮಕೃಷ್ಣ, ಕರ್ನಾಟಕದ ಬುಡಕಟ್ಟುಗಳು,ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು,2007.

2.ಕೆ.ಭೈರಪ್ಪ,ಸಮಗ್ರ ಗ್ರಾಮೀಣ ಸಮಾಜ,ಅಭಿವೃದ್ಧಿ ಮತ್ತು ಸಹಕಾರ, ಸಪ್ನ ಬುಕ್‌ಹೌಸ್,ಬೆಂಗಳೂರು,2015.

3.ಎ.ಪಿ.ಶ್ರೀನಿವಾಸಮೂರ್ತಿ,ಭಾರತ ಅಭಿವೃದ್ಧಿ ಯೋಜನೆ,ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು,1982.

4.ಬಿ.ಸಿ.ಶೈಲಾನಾಗರಾಜ,ಗ್ರಾಮೀಣ ಮಹಿಳಾ ಲೋಕ,ಸಿವಿಜಿ ಪಬ್ಲಿಕೇಷನ್ಸ್,ಬೆಂಗಳೂರು,2008.

5.ಕೆ.ಸಿ.ಚನ್ನಮ್ಮ,ಮಹಿಳೆ ದುಡಿಮೆ ಏಕರೂಪತೆಯ ಪ್ರಶ್ನೆ,ಕನ್ನಡ ವಿಶ್ವವಿದ್ಯಾಲಯ,ಹಂಪಿ,2010.

6.ಜಿ.ಎಸ್.ಕೆಂಪಯ್ಯ,ಭಾರತದಲ್ಲಿ ಕೃಷಿ,ಚೈತ್ರ ಪ್ರಕಾಶನ, ಬೆಂಗಳೂರು,2012.

7.ಎ.ಎಲ್.ಬಾಶಮ್,ಕನ್ನಡಕ್ಕೆ:ಡಿ.ಆರ್.ಮಿರ್ಜಿ,ಪ್ರಾಚೀನ ಭಾರತವೆಂಬ ಅದ್ಭುತ,ಐಬಿಎಚ್ ಪ್ರಕಾಶನ, ಬೆಂಗಳೂರು,2016.

8.ಡಿ.ಡಿ.ಕೋಸಾಂಬಿ,ಕನ್ನಡಕ್ಕೆ:ವೇಣುಗೋಪಾಲ ಮತ್ತು ಶೈಲಜಾ,ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ,ಚಿಂತನ ಪುಸ್ತಕ,ಬೆಂಗಳೂರು,2011.

9.ಎಚ್.ಎಸ್.ಶ್ರೀಮತಿ,ಸ್ತ್ರೀವಾದಿ ಸಂಶೋಧನಾ ವಿಧಿ ವಿಧಾನಗಳು,ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು,2012.

10.ಚ.ನ.ಶಂಕರ್‌ರಾವ್,ಸಾಮಾಜಿಕ ಸಂಶೋಧನೆಯ ಕೈಪಿಡಿ,ಜೈ ಭಾರತ ಪ್ರಕಾಶನ,ಮಂಗಳೂರು,2012–2013.

11.ಬಿ.ವಿ.ಶಿರೂರ,ಸಂಶೋಧನೆಯ ಸ್ವರೂಪ,ಅನ್ನಪೂರ್ಣ ಪ್ರಕಾಶನ,ಹುಬ್ಬಳ್ಳಿ,2015.

12.ದೇವಿಪ್ರಸಾದ ಚಟ್ಟೋಪಾಧ್ಯಾಯ,ಕನ್ನಡಕ್ಕೆ.ಜಿ.ಕುಮಾರಪ್ಪ,ಮಾತೆಯರು ಮಾನ್ಯರಾಗಿದ್ದಾಗ,ನವಕರ್ನಾಟಕ ಪ್ರಕಾಶನ,ಬೆಂಗಳೂರು,2002.

13.ಯಮನೂರಪ್ಪ ಅಣ್ಣಿಗೇರಿ,ಮಹಿಳೆ ಮತ್ತು ಸಮೃದ್ಧಿ ನೆಲೆಗಳು,ಕನ್ನಡ ವಿಶ್ವವಿದ್ಯಾಲಯ,ಹಂಪಿ,2010.

14.ಮೋಹನ ಕೃಷ್ಣ ರೈ,ಪರಿಸರ ಚಳುವಳಿಗಳು,ಕನ್ನಡ ವಿಶ್ವವಿದ್ಯಾಲಯ,ಹಂಪಿ,1999.

ಶಿವಪೂಜಾ ಹಿರೇಮಠ. ಡಾ.ಲಕ್ಷ್ಮೀದೇವಿ.ವೈ.

ಸಂಶೋಧನಾ ವಿದ್ಯಾರ್ಥಿನಿ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗ,

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ,

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.

ಸಹಾಯಕ ಪ್ರಾಧ್ಯಾಪಕರು

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ವಿಭಾಗ,

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.